ಸೇತುವೆ ಹಾಗೂ ಕೂಡು ರಸ್ತೆಗಳ ನಿರ್ಮಾಣ ಕಾಮಗಾರಿಯನ್ನು ಜೂನ್ 1990ರಲ್ಲಿ ಪೂರ್ಣಗೊಳಿಸಲಾಯಿತು. ಈ ಕಾಮಗಾರಿಗೆ 2,14,38,634-00 ರೂ.ಗಳು ವೆಚ್ಚವಾಗಿವೆ.

ಆ) ಹೌದು.

ಇ) 1992ರ ನವೆಂಬರ್ ತಿಂಗಳಿನ ಅಂತ್ಯದವರೆಗೆ 2,21,78,594-00ರೂ.ಗಳು ವಸೂಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ 6-7-92ರಿಂದ ಈ ಸೇತುವೆಯ ಮೇಲೆ ತೆರಿಗೆ ಹಣ ವಸೂಲು ಮಾಡಲು ಶ್ರೀ ಎಸ್.ಹೆಚ್. ಕೋನರೆಡ್ಡಿ, ಗುತ್ತಿಗೆದಾರರು, ಬಿಲಕವಾಡ, ನವಲಗುಂದ ಇವರಿಗೆ ಗುತ್ತಿಗೆ ನೀಡಲಾಗಿದೆ. ಈ ಗುತ್ತಿಗೆಯ ಅವಧಿಯು 31-3-93ರಂದು ಮುಗಿಯುತ್ತದೆ.

ಉ) ಈ ತರಹದ ಪ್ರಕರಣಗಳು ಈವರೆಗೂ ವರದಿಯಾಗಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

**ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆ ಕೊಚ್ಚಿ ಹೋಗಿರುವ ಬಗ್ಗೆ**

519 - ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು, ಶ್ರೀಮಂಗಲ ಮಂಡಲ ವ್ಯಾಪ್ತಿಗೆ ಬರುವ ಹೇರ್ಣಾಡು ದೇವಸ್ಥಾನದ ಪಕ್ಕ ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆಯ ಎರಡೂ ಬದಿ ಮಳೆಗೆ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?*

*ಇ) ಕಾಮಗಾರಿ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ರಾಮತೀರ್ಥ ಹೊಳೆಗೆ ಹೇರ್ಣಾಡು ದೇವಸ್ಥಾನದ ಬಳಿ ಇರುವ ಸೇತುವೆಯ ಎರಡೂ ಬದಿಗಳಿಗೆ ಅತಿವೃಷ್ಟಿಯಿಂದ ಸುಮಾರು 50,000 ರೂ.ಗಳಷ್ಟು ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಚಾರಕ್ಕೆ ತೊಂದರೆ ಆಗದಂತೆ ಕಾರ್ಯ ನಿರ್ವಹಿಸಲಾಗಿದ್ದು, ಅತಿವೃಷ್ಟಿ ಪರಿಹಾರ ಅನುದಾನ ದೊರೆತನಂತರ ಸಂಪೂರ್ಣ ದುರಸ್ತಿ ಮಾಡಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

**ಸಿರಾ ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆ ದುರಸ್ತಿ**

557 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಬೆಳ್ಳಾರ ಗ್ರಾಮದ ಸಿರಾ-ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆಯು ಅಪಾಯದ ಅಂಚಿನಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ, ಅದರ ದುರಸ್ತಿಗಾಗಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?*